ಸಿಸಿ.ನಂ.58/2024
ಪಿ ಡಬ್ಲ್ಯೂ-1

<u>ದಿ:**31.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಆರೋಪಿ ಪರ H.N. ವಕೀಲರಿಂದ:-

ಅಪಘಾತ ನಡೆದಿದೆ ಎಂದು ಹೇಳುವ ದಿನದಂದು ಭಾರಿಮಳೆ ಬರುತ್ತಿತ್ತು ಎಂದರೆ ಸಾಕ್ಷಿ ಜೋರಾಗಿ ಬರುತ್ತಿರಲಿಲ್ಲ ಮಳೆ ಬರುತ್ತಿತ್ತು ಎಂದು ಹೇಳುತ್ತಾರೆ . ಆರೋಪಿಯ ಮಳೆ ಬಂದ ಕಾರಣ ತಮ್ಮ ಬೈಕ್ ಅನ್ನು ರಸ್ತೆಯ ಎಡ ಭಾಗಕ್ಕೆ ಮರದ ಕೆಳಗಡೆ ನಿಲ್ಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. KA-35 EL - 4556 ಬೈಕ್ ಅನ್ನು ಚಾಸಾ-2 ರವರು ಚಲಾಯಿಸುತ್ತಿದ್ದರು ಎಂದರೆ ಸರಿ. ಚಾಸಾ-2 ರವರು ಅತೀ ವೇಗ

ಮತ್ತು ಅಜಾಗರೂಕತೆಯಿಂದ ಚಲಾನೆ ಮಾಡಿಕೊಂಡು ಬಂದು ನಾನು ಮರದ ಕೆಳಗೆಡೆ ನಿಲ್ಲಿಸಿಕೊಂಡಿದ್ದ ಬೈಕ್ ಗೆ ಹಿಂಬದಿಯಿಂದ ಡಿಕ್ಕಿ ಪಡಿಸಿರುತ್ತಾರೆ ಎಂದು ದಿಃ 30.07.2023 ರಂದು ಜಗಳೂರು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ರವರು ಬೈಕ್ ಚಲಾವಣೆ ಮಾಡಲು ಪರವಾನಗೆ ಇರುವುದಿಲ್ಲ ಎಂದರೆ ನನಗೆ ಗೋತ್ತಿಲ್ಲ . ಚಾಸಾ-2 ರವರು ತಮ್ಮ ಬಳಿ ಪರವಾನಗೆ ಇಲ್ಲದೇ ಇದ್ದರು ಸಹ ಬೈಕ್ ಅನ್ನು ಚಲಾವಣೆ ಮಾಡಿಕೊಂಡು ಬಂದು ಆರೋಪಿ ಬೈಕ್ ಗೆ ಹಿಂಬದಿಯಿಂದ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಚಾಸಾ-2 ರವರ ತಪ್ಪಿನಿಂದಲೇ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 1 ಪೋಟೋದಲ್ಲಿ ಕಾಣುವ KA-35 EL ಬೈಕ್ ಚಾಸಾ-2 ರವರು ಚಲಾಯಿಸುತ್ತಿದ್ದ ಬೈಕ್ ಇರುತ್ತದೆ ಎಂದರೆ ಸರಿ. ಚಾಸಾ-2 ರವರೇ ಹಿಂಬದಿಯಿಂದ ಬಂದು ಆರೋಪಿಯ ಬೈಕಿಗೆ ಡಿಕ್ಕಿಪಡಿಸಿರುತ್ತಾರೆ ಆದ ಕಾರಣ ನಿಪಿ 2 ಪೋಟೋದಲ್ಲಿ KA -35 EL ಬೈಕ್ ಮುಂದೆ ಜಖಂ ಗೋಂಡಿರುತ್ತದೆ ಆರೋಪಿಯ ಬೈಕ್ ಗೆ ಯಾವುದೇ ಹಾನಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆಸಿ ಆರೋಪಿಯು ತನ್ನ KA-17 HH-6280 ಬೈಕ್ ನ ಟ್ಾಂಕ್ ನ ಮೇಲೆಮತ್ತು ಸಿಟಿನ ಹಿಂದೆ ಅಡಿಕೆ ಚಿಲಗಳನ್ನು ಇಟ್ಟುಕೊಂಡು ಬರುತ್ತಿದ್ದರು , ಅಪಘಾತವಾದಗ ಆರೋಪಿ ಟ್ಯಾಂಕ್ ನ ಮೇಲೆ ಇಟ್ಟಿದ ಅಡಿಕೆ ಚೀಲವು ಚಾಸಾ-2 ರವರು ಚಲಾಯಿಸುತ್ತಿದ್ದ KA 35-EL ಬೈಕ್ ನ ಮುಂದೆ ಡಿಕ್ಕಿ ಆಗಿರುತ್ತದೆ . ಆದ ಕಾರಣಸದರಿ ಬೈಕ್ ನ ಮುಂದೆ ಭಾಗ ಜಖಂಗೋಂಡಿರುತ್ತದೆ ಎಂದು ಹೇಳುತ್ತಾರೆ . ಆರೋಪಿಯು ತನ್ನ ಬೈಕ್ ನಲ್ಲಿ 2 ಅಡಿಕೆ ಚೀಲಗಳನ್ನು ಇಟ್ಟುಕೊಂಡು ಬರುತ್ತಿದ್ದರು . ಆರೋಪಿಯ ಯಾವುದೇ ಅಡಿಕೆ ಚೀಲಗಳನ್ನು ಇಟ್ಟುಕೊಂಡು ಬರುತ್ತಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿ ವಿರುದ್ದ ಅಪಘಾತವಾದ ಸಂಬಂದವಾಗಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಚಾಸಾ-2 ರವರು ಬೈಕ್ ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಆರೋಪಿ ಬೈಕ್ ಡಿಕ್ಕಿ ಪಡಿಸಿದರು ಸಹ ನಾವು ಪರಿಹಾರಕ್ಕಾಗಿ ಪೋಲೀಸರ ಜೋತೆ ಶಾಮಿಲಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ . ಪೋಲೀಸರಿಗೆ ಈ ಬಗ್ಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ . ಆರೋಪಿ ತಪ್ಪಿನಿಂದ ಯಾವುದೇ

ಅಪಘಾತವಾಗಿರುವುದಿಲ್ಲ , ಚಾಸಾ-2 ರವರ ತಪ್ಪಿನಿಂದಲೇ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು